ಸೃಜನಶೀಲ ಸೃಷ್ಟಿಯಲ್ಲ ಎಂಬ ಕಡೆಗಣನೆ. ಇದು ಸಲ್ಲದು. ಆದಷ್ಟು ಅನುವಾದಕರಿಗೆ ಪ್ರೋತ್ಸಾಹ ದೊರೆತು ಪುಸ್ತಕ ಪ್ರಕಟಣೆಗೆ ಅನುವು ಮಾಡಿಕೊಟ್ಟರೆ ಈ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾದೀತು.

**4**

ಭಾಷಾಂತರದ ಸಂದರ್ಭದಲ್ಲಿ ಹೊಸಬರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯೆಂದರೆ, ಮೂಲ ಲೇಖಕರಿಂದ ಅಥವಾ ಪ್ರಕಾಶನಗಳಿಂದ ಹಕ್ಕು ಸ್ವಾಮ್ಯಗಳನ್ನು ಖರೀದಿಸುವ ವಿಧಾನ ಬಹಳ ಕಷ್ಟವಾಗಿದ್ದು, ಗೊಂದಲದಿಂದ ಕೂಡಿದೆ. ಇದನ್ನು ಹೇಗಾದರೂ ಮಾಡಿ ಬೇಗನೇ ಪರಿಹರಿಸಬೇಕು. ಬೇರೆ ಬೇರೆ ಭಾಷೆಗಳಿಂದ (ಭಾರತೀಯ ಮತ್ತು ಇತರ ದೇಶಗಳ) ಸತ್ವಯುತ ಸಾಹಿತ್ಯ ನಮ್ಮ ಭಾಷೆಗೆ ಹರಿದುಬರಬೇಕು. ಮಾತ್ರವಲ್ಲ, ಅವು ಜನಪ್ರಿಯವಾಗಿ ಮನೆಮಾತಾಗಬೇಕು. ವಿಶ್ವ ಸಾಹಿತ್ಯ ಎಲ್ಲರ ಕೈಗೆಟಕಿದಾಗ 'ವಸುಧೈವ ಕುಟುಂಬಕಂ' ಎಂಬುದು ನಿಜವಾಗಿ, ಇಡೀ ಪ್ರಪಂಚದಲ್ಲಿ ನಾವೊಂದು ಪುಟ್ಟ ಬಿಂದು ಎಂಬ ಭಾವ ಮೂಡಿ ನಮ್ಮ ಅಹಂ ನಾಶವಾಗುವುದು.

**5**

ನನಗೆ ತಿಳಿದಂತೆ ಅನುವಾದಿತ ಕೃತಿಗಳಿಗೆ, ಅದರಲ್ಲೂ ಕಥೆ, ಕಾದಂಬರಿ ಪ್ರಕಾರಗಳ ಹೊರತಾಗಿ, ಕವಿತೆ, ನಾಟಕ, ವೈಜ್ಞಾನಿಕ, ವೈಚಾರಿಕ ಕೃತಿಗಳಿಗೆ ಬೇಡಿಕೆ ಕಡಿಮೆ. ಕೇವಲ ಕಥೆ, ಕಾದಂಬರಿ, ಜೀವನ ಕಥನಗಳಿಗೆ ಮಾತ್ರ ಮಾರುಕಟ್ಟೆ ಇದೆ. ಈ ವಿಚಾರದಲ್ಲಿ ನನ್ನ ಅನುಭವ ಅಷ್ಟಾಗಿಲ್ಲವಾದ್ದರಿಂದ ಹೆಚ್ಚೇನೂ ಹೇಳಲಾರೆ.

**6**

ಹೌದು. ಇತರ ಭಾರತೀಯ ಭಾಷೆಗಳಿಂದ ನೇರವಾಗಿ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳಬೇಕಿದೆ. ಅವು ಅನುವಾದದ ಅನುವಾದವಾಗಿಬಿಟ್ಟರೆ ಮೂಲ ಲೇಖಕರ ಭಾವವು ಕನ್ನಡದ ಓದುಗರನ್ನು ತಲುಪುವುದಿಲ್ಲ. ಆದಷ್ಟೂ ಎರಡು ಅಥವಾ ಮೂರು ಭಾಷೆಗಳನ್ನು ಅಧ್ಯಯನ ಮಾಡಿ ಕಲಿತವರು, ಬರವಣಿಗೆಯಲ್ಲಿ ಒಲವು, ಬಲವೂ ಇರುವವರು ಅನುವಾದಗಳನ್ನು ಮಾಡಿದರೆ ಉತ್ತಮ. ಎಲ್ಲಕ್ಕೂ ಮಿಗಿಲಾಗಿ ಅವನ್ನು ಪ್ರಕಟಿಸಲು ನಮ್ಮಲ್ಲಿ ಪ್ರಕಾಶಕರು ಸಿದ್ಧರಾಗಿ ಇರಬೇಕು.

**7**

ನನ್ನ ಮೆಚ್ಚಿನ ಅನುವಾದಿತ ಕೃತಿ ಜಯಶ್ರೀ ಭಟ್ ಅನುವಾದಿಸಿದ ಲೀ ಕುನ್ ಕ್ಸಿನ್ ಅವರ 'ಮಾವೋನ ಕೊನೆಯ ನರ್ತಕ'. ಅತ್ಯಂತ ನವುರಾಗಿ ಅತಿ ಕ್ಲಿಷ್ಟ ಸನ್ನಿವೇಶಗಳನ್ನು ಅನುವಾದಕರು ಕಟ್ಟಿಕೊಡುವ ಪರಿ, ಇದು ಚೀನಾದಲ್ಲಿ ನಡೆದ ಕತೆಯಾದರೂ ಇಲ್ಲೇ ಎಲ್ಲೋ ನಮ್ಮೆದುರಿನಲ್ಲೇ ಸಂಭವಿಸಿದಂತಹ ಭಾವನೆಯನ್ನು ಮೂಡಿಸುತ್ತದೆ. ಅದ್ಭುತ ನಿರೂಪಣೆಯಿಂದ ಕೂಡಿ ಸರಾಗವಾಗಿ ಓದಿಸಿಕೊಂಡು ಹೋಗುವ ಪುಸ್ತಕ.

**8**

ಪ್ರಕಾಶಕರು, ಓದುಗರು, ಸಾಹಿತ್ಯ ಸಂಸ್ಥೆಗಳು ಅನುವಾದಕರನ್ನು ಅನುವಾದಿತ ಕೃತಿಗಳನ್ನು ಪ್ರೋತ್ಸಾಹಿಸಲು ಮುಂದೆಬರಬೇಕಿದೆ. **My Lang books**, ಛಂದ ಪುಸ್ತಕ, ಅಂಕಿತ ಪುಸ್ತಕ, ಮೊದಲಾದ ಪ್ರಕಾಶಕರು ಈಗಾಗಲೇ ಈ ನಿಟ್ಟಿನಲ್ಲಿ ಕಾರ್ಯವೆಸಗುತ್ತಿದ್ದಾರೆ. ಅವರ ಪ್ರಯತ್ನ ಸಫಲವಾಗಲಿ. ಮುಂದಿನ ದಿನಗಳಲ್ಲಿ ಕನ್ನಡದ ಓದುಗರು ಹೆಚ್ಚಲಿ, ನಮ್ಮ ಮುಂದಿನ ಪೀಳಿಗೆಯು ಕನ್ನಡ ಕಲಿಯಲಿ, ಓದಲಿ, ಎಂದು ಆಶಿಸುತ್ತೇನೆ.

ವಿಕಿ ಕಾನ್‌ಸ್ಟಂಟೇನ್ ಕ್ರೂಕ್ ಅವರ 'ಎಲಿಫಂಟ್ ಕಂಪನಿ' ಎಂಬ ಪುಸ್ತಕವನ್ನು 'ಬಂಡೂಲ' ಎಂಬ ಹೆಸರಿನಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ.